ವಿಜಯವಾಣಿ
ಕನ್ನಡಿಗರ ಧ್ವನಿ

**ಆಗಸ್ಟ್ 15 ಆಚರಿಸೋದು ಹೇಗೆ? ಬರೀ ರಾಷ್ಟ್ರಧ್ವಜ ಹಾರಿ ಸುಮ್ಮನಾಗಿಬಿಡೋದೇ? ಛೇ, ಹಾಗಲ್ಲ. ನಾವು ಭಾರತೀಯರು. ಯಂಗ್ ಇಂಡಿಯನ್ಸ್. ಪ್ರತಿ ಕ್ಷಣವೂ ದೇಶವನ್ನು ಪ್ರೀತಿಸಬೇಕು.**

# ಫ್ರೀಡಮ್ ಫ್ಲವರ್ಸ್

ಸ್ವಾತಂತ್ರ್ಯ ದಿನಾಚರಣೆಯಂದು ಚರಿತ್ರೆಯ ಇಣುಕು ನೋಟ ಒಂದು ದಿನದಲ್ಲಿ ನಡೆದು ಹೋಗುತ್ತದೆ. ಮತ್ತೆ ಎಲ್ಲವೂ ಮರೆತು ಹೋಗುತ್ತದೆ. ಸ್ವಾತಂತ್ರ್ಯದ ಹೆಸರಲ್ಲಿ ಸ್ವೇಚ್ಛಾಚಾರ ನಡೆಯುತ್ತಲೇ ಇರುತ್ತದೆ. ಆದಾಗ್ಯೂ 'ಸ್ವಾತಂತ್ರ್ಯ' ಅಂದ್ರೆ ಏನು, ನಿಜವಾಗಿಯೂ ನಮಗೆ ಸ್ವಾತಂತ್ರ್ಯ ಸಿಕ್ಕಿದೆಯಾ ಎಂದು ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿನ ಕೆಲವು ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗ ಅವರು ಲವಲವಿಕೆಯಿಂದಲೇ ಅಭಿಪ್ರಾಯ ವ್ಯಕ್ತಪಡಿಸಿದ್ದು ಹೀಗೆ!

ಆಗಸ್ಟ್ 14, 1947ರಂದು ಜಗತ್ತು ಮಲಗಿರುವಾಗ ಮಧ್ಯರಾತ್ರಿಯ ಗಂಟೆ ಬಾರಿಸುತ್ತಿದ್ದಂತೆ ನಮ್ಮ ದೇಶ ಸ್ವಾತಂತ್ರ್ಯ ಮತ್ತು ಚಲನ ಶೀಲತೆಗೆ ಎಚ್ಚರ ಗೊಳ್ಳುತ್ತದೆ. ದಾಸ್ಯ ಸಂಕೋಲೆಯಿಂದ ಬಿಡುಗಡೆ ಹೊಂದಿದ ನಮ್ಮ ದೇಶದ ಚೇತನವು ಅಭಿವ್ಯಕ್ತಿ ಯನ್ನು ಕಂಡುಕೊಂಡ ಕ್ಷಣ ಇದು. ಇತಿಹಾಸಕ್ಕೆ ಸೇರಿಕೊಂಡಿರುವ ಈ ಗಳಿಗೆಯನ್ನು ಸಂಭ್ರಮಿಸುವ ಆ ದಿನ ಮತ್ತೊಮ್ಮೆ ಬಂದಿದೆ.

ಒಂದನೇ ಕ್ಲಾಸಿನಿಂದ ಓದು ಮುಗಿಯುತ್ತಿದ್ದವರೆಗೂ ಸ್ವಾತಂತ್ರ್ಯ, ಸ್ವಾತಂತ್ರ್ಯ ದಿನಾಚರಣೆ, ಸ್ವಾತಂತ್ರ್ಯ ಹೋರಾಟಗಾರರು, ಸ್ವತಂತ್ರ ಭಾರತದ ಕುರಿತಾದ ಹಿರಿಯರ ಭಾಷಣಗಳಲ್ಲಿ ಕೇಳಿಬರುತ್ತವೆ. ಅದು ಈ ದಿನಕ್ಕೆ ಮಾತ್ರ ಸೀಮಿತ. ಇನ್ನು ಕೆಲವೊಮ್ಮೆ ಪಠ್ಯ ವಿಷಯವಾಗಿ ಪಠ್ಯ ಪುಸ್ತಕಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸ್ವಾತಂತ್ರ್ಯ ಹೋರಾಟ ಜೀವನಕ್ಕೆ ಸ್ಫೂರ್ತಿಯಾಗಿರ ಬೇಕು. ಸ್ವಾತಂತ್ರ್ಯದ ನಿಲುವಿ ನೊಂದಿಗೆ ದೇಶದ ಸಾಧನೆಗೆ ನಿಸ್ವಾರ್ಥ ಸೇವೆ ಸಲ್ಲಿಸಬೇಕು.

ನೂರು ವರ್ಷಗಳ ಹೋರಾಟದ ಫಲವಾಗಿ ಬ್ರಿಟಿಷರ ಅಧೀನತೆಯಿಂದ ಬಿಡುಗಡೆ ಹೊಂದಿದ್ದೇವೆ. ಆ ದಿನವನ್ನು 65 ಬಾರಿಯೂ ಆಚರಿಸಿ ಸಂಭ್ರಮಿಸಿದ್ದೇವೆ. ಬ್ರಿಟಿಷರ ದಾಸ್ಯದಿಂದ ಮುಕ್ತಿ ಪಡೆದಿದ್ದೇವೆ ಅನ್ನೋದೇನೋ ನಿಜ. ಆದರೆ ನಮ್ಮವರಿಂದಲೇ ಕೆಲವೊಂದು ವಿಚಾರಗಳಲ್ಲಿ ಇನ್ನೂ ಬಂಧನ ದಲ್ಲಿದ್ದೇವೆಯೋ ಎಂಬಂತೆ ಭಾಸವಾಗುತ್ತದೆ. ಸಂವಿಧಾನ ಬದ್ಧವಾದ ಸ್ವಾತಂತ್ರ್ಯಗಳಿದ್ದರೂ ಅನುಭವಿಸುವುದಕ್ಕೆ ಸಾಧ್ಯ ಆಗುತ್ತಿಲ್ಲ. ಕೆಲವರಷ್ಟೆ ಸ್ವಾರ್ಥಕ್ಕಾಗಿ ಸ್ವಾತಂತ್ರ್ಯವನ್ನು ಸುಖಿಸುವಂತಾಗಿದೆ. ಹಾಗಾಗಿ ಸ್ವಾತಂತ್ರ್ಯ ಬಂದ ನಂತರದ 65 ವರ್ಷಗಳ ಇತಿಹಾಸದಲ್ಲಿ ನಮ್ಮ ದೇಶಕ್ಕಾದ ಒಳಿತು ಕೆಡುಕುಗಳೇನು ಎಂಬುದರ ಕುರಿತು ಎಲ್ಲರೂ ಯೋಚಿಸಬೇಕಾಗಿದೆ. ●



ನೂರು ವರ್ಷಗಳ ಹೋರಾಟದ ಫಲವಾಗಿ ಸಿಕ್ಕಿದ ಸ್ವಾತಂತ್ರ್ಯವನ್ನು ರಾಜಕಾರಣಿಗಳು ಬೆಳೆಸಿದ್ದು, ಬಳಸಿದ್ದು ಭ್ರಷ್ಟಾಚಾರ. ವಾಕ್ ಸ್ವಾತಂತ್ರ್ಯ ಇದ್ದರೂ ಅದನ್ನು ಕಳೆದುಕೊಂಡಿದ್ದೇವೆ. ಪ್ರಶ್ನಿಸುವ ಮನೋಭಾವ ನಮ್ಮ ದಾದರೂ ಪ್ರಶ್ನಿಸುವಂತಿಲ್ಲ. ಸ್ವಾತಂತ್ರ್ಯ ಸಿಕ್ಕಿ 62 ವರ್ಷಗಳೇ ಕಳೆದರೂ ಇನ್ನೂ ದಾಸ್ಯದಲ್ಲಿದ್ದೇವೋ ಎಂದೆನಿಸುತ್ತದೆ.
■ **ರಮ್ಯ**

ಸ್ವಾತಂತ್ರ್ಯ ಅಂದಾಕ್ಷಣ ಏನು ಬೇಕಾದರೂ ಮಾಡಬಹುದು ಅಂದುಕೊಂಡರೆ ತಪ್ಪು. ನೀಡಿದ ಸ್ವಾತಂತ್ರ್ಯಯಕ್ಕೂ ನಿರ್ಬಂಧಗಳಿವೆ. ಸ್ವಾತಂತ್ರ್ಯದ ಇತಿಮಿತಿಗಳನ್ನು ಗಮನದಲ್ಲಿರಿಸಿಕೊಂಡು ಬಳಸಿಕೊಂಡರೆ ದೇಶಕ್ಕೇ ಒಳಿತು.
■ **ಹರಿಣಿ ಶಿಬರಾಯ**

ಹಿರಿಯರ ತ್ಯಾಗ, ಹೋರಾಟದ ಫಲವೇ ನಾವಿಂದು ಸ್ವತಂತ್ರವಾಗಿದ್ದೇವೆ. ಸಿಕ್ಕಿದ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಸ್ವಾತಂತ್ರ್ಯ ಪದಕ್ಕೆ ಅರ್ಥ ಬರುತ್ತದೆ.
■ **ಸೋಮಯ್ಯ**

ಕ್ಷಣಿಕ ವಿಷಯಗಳಿಗೂ ಸಂಘರ್ಷಗಳು ನಡೆಯುತ್ತಿರುವುದು ಧರ್ಮ, ಜಾತಿಯ ಕುರಿತಾದ ಸ್ವಾತಂತ್ರ್ಯಕ್ಕಾಗಿಯೇ. ಅವೆಲ್ಲದರ ಹೊರತಾಗಿ ಮಾನವತ್ವ ಗುಣ ಇದ್ದರೆ ಸಾಕು. ನಿಜವಾದ ಸ್ವಾತಂತ್ರ್ಯ ತಾನಾಗಿಯೇ ಸಿಗುತ್ತದೆ.
■ **ಪ್ರದೀಪ್**

ಒಂದು ದಿನಕ್ಕೆ ದಿನಾಚರಣೆ ಮಹತ್ವ ಪಡೆದುಕೊಳ್ಳಬಾರದು. ಭ್ರಷ್ಟಾಚಾರ ಸ್ವೇಚ್ಛಾಚಾರ ದಿಂದಾಗಿ ಸ್ವಾತಂತ್ರ್ಯ ಪದ ಅರ್ಥ ಕಳೆದುಕೊಂಡಿದೆ.
■ **ಅಯ್ಯಪ್ಪ**

ಸಾಮಾನ್ಯ ಜನರು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸುವುದಕ್ಕೆ ಸಾಧ್ಯ ಆಗುತ್ತಿಲ್ಲ. ರಾಜಕಾರಣಿ ಗಳು ನಾಗರಿಕರ ಸ್ವಾತಂತ್ರ್ಯ ಕಸಿದುಕೊಂಡಿದ್ದಾರೆ. ಅಭಿವೃದ್ಧಿಯ ಹೆಸರಲ್ಲಿ ಅವೆಲ್ಲ ದುರುಪಯೋಗ ಆಗುತ್ತಿದೆ.
■ **ಮಹಾಲಕ್ಷ್ಮಿ**

ಒಂದು ದಿನದ ಮಟ್ಟಿಗೆ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸಿ ಕೊಳ್ಳುವುದು ಸಾಮಾನ್ಯ. ಅವರ ತ್ಯಾಗ, ಬಲಿದಾನದ ತತ್ವಗಳನ್ನು ಎಷ್ಟರ ಮಟ್ಟಿಗೆ ಜೀವನದಲ್ಲಿ ಅಳವಡಿಸಿಕೊಂಡಿದ್ದೇವೆ ಅನ್ನೋದು ಮುಖ್ಯ.
■ **ಅಮೂಲ್ಯ ಎಸ್**

ಸ್ವಾತಂತ್ರ್ಯ ಅನ್ನೋದು ಸ್ವೇಚ್ಛಾಚಾರ ಆಗಿದೆ. ಎಲ್ಲ ಕಡೆ ಸ್ವಾತಂತ್ರ್ಯ ಸಿಕ್ಕಿಲ್ಲ. ಕಟ್ಟುಕಟ್ಟಳೆಗಳು ನಮ್ಮನ್ನು ಬಂಧನ ದಲ್ಲಿರಿಸಿವೆ. ಮಹಿಳೆಯರ ಶಿಕ್ಷಣ, ಮಾನವ ಹಕ್ಕುಗಳಿಗಾಗಿ ಇನ್ನೂ ಹೋರಾಡಬೇಕಾದ ಸ್ಥಿತಿ ಇದೆ. ಇದು ನಿಜಕ್ಕೂ ದುರಂತ.
■ **ಮೇಘನಾ ಎಸ್. ಬೈರಪ್ಪ**

ಸ್ವಾತಂತ್ರ್ಯವೇನೋ ಸಿಕ್ಕಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಲ್ಲಿನ ದೇಶಪ್ರೇಮ, ತ್ಯಾಗ, ಬಲಿದಾನದ ಸಂಕೇತವೇ ಈ ಸ್ವಾತಂತ್ರ್ಯ. ಆದರೆ ಇಂದು ದೇಶಪ್ರೇಮ ಬೆಳೆಸಿಕೊಂಡವರು ಕಾಣಿಸುತ್ತಿಲ್ಲ. ಸ್ವಾಭಿಮಾನ ಇತ್ತು. ಈಗ ಸ್ವಾರ್ಥ ಇದೆ.
■ **ಸಂಹಿತ ಶ್ರೀಶೈಲ**

■ ಶ್ರೀದೇವಿ ಅಂಬೆಕಲ್ಲು ಫೋಟೋ : ರವೀಂದ್ರ ನಾಯಕ್
ಕೃಪೆ : ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು